

# ಗಾಂಧಿನಗರ ಪೋಸ್ಟ್

■ ರಘು



## ಸಾಯಿಪ್ರಕಾಶ್ ಮರುಜನ್ಮ

ಇದು ನನಗೆ ಪುನರ್ಜನ್ಮ! ಸಾಯಿಪ್ರಕಾಶ್ ಹಾಗೆಂದು ಹೇಳಲಿಕ್ಕೆ ಕಾರಣವಿತ್ತು. ಸಿನಿಮಾ ನಿರ್ಮಾಣದಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ಘಾಸಿಗೊಂಡಿದ್ದ ಅವರು ಆತ್ಮಹತ್ಯೆಗೆ ಯತ್ನಿಸಿದ್ದರು. ಆ ಕಹಿಯ ನಂತರ ಸಾಯಿಪ್ರಕಾಶ್ ನಿರ್ದೇಶಕನ ಟೊಪ್ಪಿ ತೊಡುತ್ತಿರುವುದು ಇದೇ ಮೊದಲು. ಹಾಗಾಗಿಯೇ ಇದು ಪುನರ್ಜನ್ಮ. ಹಾಂ, ಅವರು ನಿರ್ದೇಶಿಸುತ್ತಿರುವ ಚಿತ್ರದ ಹೆಸರು 'ಶ್ರೀ ನಾಗಶಕ್ತಿ'. ಚಿತ್ರದ ಶೀರ್ಷಿಕೆಯೇ ಸೂಚಿಸುವಂತೆ ಇದು ದೈವ ಹಾಗೂ ದುಷ್ಟಶಕ್ತಿಯ ಜುಗಲಬಂದಿ ಕಥೆ. ಹಾಗಾಗಿ ಇದು ಕೂಡ ಒಂದರ್ಥದಲ್ಲಿ ಜನ್ಮಾಂತರದ ಕಥೆಯೇ!

ಒಂದು ಕಾಲದಲ್ಲಿ ನಾಯಕಿಯಾಗಿ ನಟಿಸಿದ್ದ ಪಿ. ಚಂದ್ರಿಕಾ 'ನಾಗಶಕ್ತಿ' ಚಿತ್ರದ ಮೂಲಕ ನಿರ್ಮಾಪಕಿಯಾಗುತ್ತಿದ್ದಾರೆ. ನಾಗದೇವತೆ ಪಾತ್ರದಲ್ಲಿ ನಟಿಸುತ್ತಲೂ ಇದ್ದಾರೆ. ಶ್ರುತಿ ಹಾಗೂ ರಾಮ್‌ಕುಮಾರ್ ನಾಯಕ ನಾಯಕಿ. ಇಬ್ಬರೂ ಹಾವಿನಾಟದ ಚಿತ್ರಗಳಲ್ಲಿ ಅಭಿನಯಿಸಿ ಅನುಭವವುಳ್ಳವರು.

ಮತ್ತೆ ಸಾಯಿಪ್ರಕಾಶ್ ವಿಷಯಕ್ಕೆ ಬರೋಣ. ಆರ್ಥಿಕ ಸಂಕಷ್ಟದಿಂದ ಅವರು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರಂತೆ. ಹರಾಜಿಗೆ ಬಂದಿದ್ದ ಮನೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ 'ನಾಗಶಕ್ತಿ' ಅವರಿಗೆ ನೆರವಾಗಿದೆ. ಇನ್ನೂ ಮೂರ್‍ನಾಲ್ಕು ಚಿತ್ರಗಳನ್ನು ಸಾಯಿಪ್ರಕಾಶ್ ಒಪ್ಪಿಕೊಂಡಿದ್ದಾರಂತೆ.

## ಕೀರ್ತಿ ಪತಾಕೆ!

'ಚಿರು' ಚಿತ್ರದ ಧ್ವನಿಸುರುಳಿ ಕಾರ್ಯಕ್ರಮದಲ್ಲಿ ನಿರ್ದೇಶಕ ಮಹೇಶ್‌ಬಾಬು ಲವಲವಿಕೆಯಿಂದ ಪುಟಿಯುತ್ತಿದ್ದರು. 'ಚಿರು' ಅವರ ನಿರ್ದೇಶನದ ಆರನೇ ಚಿತ್ರ. ಆರಂಭದಲ್ಲಿ ಯಶಸ್ಸು, ನಂತರದಲ್ಲಿ ನಿರಾಶೆಯನ್ನು ಕಂಡ ಮಹೇಶ್‌ಬಾಬುಗೆ 'ಚಿರು' ಮೂಲಕ ಮತ್ತೆ ಗೆಲುವಿನ ಏಣಿಯೇರುವ ತಹತಹ.

ಚಿರಂಜೀವಿ ಸರ್ಜಾ ಹಾಗೂ ಕೀರ್ತಿ ಕರಬಂಧ ಚಿತ್ರದ ನಾಯಕ ನಾಯಕಿ. ಚಿರಂಜೀವಿ ಉತ್ಸಾಹದ ಬುಗ್ಗೆ. ಕೀರ್ತಿ ಬಗ್ಗೆ ನಿರ್ದೇಶಕರಿಗೆ ಇನ್ನಿಲ್ಲದ ಅಭಿಮಾನ. ತಾವು ಪರಿಚಯಿಸಿದ ಐಂದ್ರಿತಾ ರೇ ಅಂತೆಯೇ ಚಿರು ಚೆಲುವೆ ಕೂಡ ಚಿತ್ರರಂಗದಲ್ಲಿ ಕೀರ್ತಿಪತಾಕೆ ಹಾರಿಸುವ ವಿಶ್ವಾಸ ಅವರದ್ದು.




ಧ್ವನಿಸುರುಳಿ ಪೇಟೆಯಲ್ಲಿ ಸದ್ಯಕ್ಕೆ 'ಚಿರು' ಹವಾ ಜೋರಾಗಿಯೇ ಇದೆ. ಪತ್ರಿಕೆಯೊಂದರ ಜೊತೆ ಚಿತ್ರದ ಗೀತೆಗಳ ಧ್ವನಿಚಕ್ರವನ್ನು ಉಚಿತವಾಗಿ ವಿತರಿಸಲಾಗಿದೆ. ಪೇಟೆಯಲ್ಲಿ ಕೊಳ್ಳುವವರಿಗೆ ಹದಿನೈದೇ ರೂಪಾಯಿ ಬೆಲೆ. ಈ ತಂತ್ರದಿಂದಾಗಿ 'ಚಿರು' ಗೀತೆಗಳು ಹೆಚ್ಚು ಜನರಿಗೆ ತಲುಪಿವೆ ಎನ್ನುವುದು ಚಿತ್ರತಂಡದ ಅನಿಸಿಕೆ.

## ಅಥರ್ವನ ಅವತಾರ

ಅಜ್ಜ ಮಗ ಮೊಮ್ಮಗ. ತಮಿಳು ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿರುವ ಕನ್ನಡದ ಹುಡುಗ ಮುರಳಿಗೆ ಈಗ ಬಡ್ತಿ ಸಿಕ್ಕಂತಾಗಿದೆ. ಅವರ ಮಗ ಅಥರ್ವ ನಾಯಕನಾಗಿ ನಟಿಸಿರುವ ಚೊಚ್ಚಲ ಸಿನಿಮಾ ಕಳೆದ ವಾರ ತೆರೆಕಂಡಿದೆ. ಅಂದಹಾಗೆ, ಅದು ತಮಿಳು ಸಿನಿಮಾ, ಹೆಸರು 'ಬಾನ ಕಾತಾಡಿ'. ಗಾಳಿಪಟದ ಹುಡುಗ ಅಥರ್ವ ಮುಂದಿನ ದಿನಗಳಲ್ಲಿ ಕನ್ನಡದಲ್ಲೂ ನಟಿಸಲಿದ್ದಾನೆ ಎಂದರು ಮುರಳಿ.

ತನ್ನ ಮಗನ ಬಗ್ಗೆ ಮುರಳಿ ಹೆಮ್ಮೆಯಿಂದ ಮಾತನಾಡುತ್ತಿದ್ದರೆ ಸಿದ್ದಲಿಂಗಯ್ಯನವರ ಕಣ್ಣುಗಳು ಮಿನುಗುತ್ತಿದ್ದವು. ಸಿನಿಮಾದಲ್ಲಿ ಪಳಗಿದ ಮಗ, ಕನಸುಕಂಗಳ ಮೊಮ್ಮಗ– ಸಿದ್ದಲಿಂಗಯ್ಯನವರ ದೃಷ್ಟಿ ಅತ್ತಿಂದಿತ್ತ ಹೊರಳುತ್ತಿತ್ತು. ಅಥರ್ವನಿಗೆ ಸಿನಿಮಾದಲ್ಲಿ ನಟಿಸುವ ಆಸೆ ಹುಟ್ಟಲಿಕ್ಕೆ ಸಿದ್ದಲಿಂಗಯ್ಯನವರೇ ಕಾರಣವಂತೆ. ಓದು, ಫುಟ್‌ಬಾಲ್ ಎಂದು ತನ್ನ ಲೋಕದಲ್ಲಿ ತಾನಿದ್ದ ಮೊಮ್ಮಗನಲ್ಲಿ ನಟನೆಯ ಹುಚ್ಚು ಹಚ್ಚಿದ್ದೇ ತಾತನಂತೆ.

ಮುರಳಿ ತಮ್ಮ ಚೊಚ್ಚಲ ಚಿತ್ರ 'ಪ್ರೇಮ ಪರ್ವ'ದ ದಿನಗಳನ್ನು ನೆನಪಿಸಿಕೊಂಡರು. ಆಗ ಅನೇಕ ಮಂದಿ ಕರಿಯನೆಂದು ಹೀಗಳೆದಿದ್ದರು. ಆದರೆ, ನಂತರದ ದಿನಗಳಲ್ಲಿ ನಡೆದದ್ದೇ ಬೇರೆ. ತಮಿಳು ಪ್ರೇಕ್ಷಕರು ಮೋಹನ ಮುರಳಿಗೆ ಮರುಳಾದರು. ಕೌಟುಂಬಿಕ ಚಿತ್ರಗಳ ಮೂಲಕ ಕನ್ನಡದ ಹುಡುಗ ತಮಿಳುನೆಲದಲ್ಲಿ ಮನೆಮಾತಾದ. ಈಗ ತಮ್ಮ ಹಾದಿಯಲ್ಲಿ ಮಗ ಅಥರ್ವನೂ ನಡೆಯುವ ನಿರೀಕ್ಷೆ ಅವರದ್ದು.





